ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಆರ್. ಕೃಷ್ಣ ಕುಮಾರ್

ಕೆ. ಈರೇಗೌಡ ವಿರುದ್ಧ ಕರ್ನಾಟಕ ರಾಜ್ಯದ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಮತ್ತು ಇತರರು

ರಿಟ್ ಅಪೀಲುಸಂಖ್ಯೆ: 2366/2019 ಮತ್ತು ಇದರೊಂದಿಗೆ ಇತರೆ., ದಿ:22 ನೇ ಅಕ್ಟೋಬರ್, 2019.

ತೀರ್ಪು

ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ

8 ನೇ ಆಗಸ್ಟ, 2019 ರ ಆದೇಶದ ಮೂಲಕ, ಅಪೀಲುಗಳನ್ನು ಅಂತಿಮವಾಗಿ ವಿಲೆ ಮಾಡಲಾಗುವುದು ಎಂಬುದನ್ನು ಪಕ್ಷಕಾರರ ಗಮನಕ್ಕೆ ತರಲಾಗಿತ್ತು.

2. ಅಪೀಲುಗಳಲ್ಲಿನ ವಿವಾದವನ್ನು ಕುರಿತು ವಿವೇಚಿಸುವ ದೃಷ್ಟಿಯಿಂದ, ಮೊಕದ್ದಮೆಯ ಸಂಗತಿಗಳನ್ನು ಸಂಕ್ಷಿಪ್ತವಾಗಿ ಉಲ್ಲೇಖಿಸುವುದು ಅಗತ್ಯವಾಗಿದೆ.

3. ಈ ಅಪೀಲಿನಲ್ಲಿ, 4 ನೇ ಪ್ರತಿವಾದಿ-ಸಂಘದ ವಿಷಯದ ಕಡೆ ನಾವು ಗಮನಹರಿಸುತ್ತೇವೆ.02 ನೇ ಸೆಪ್ಟೆಂಬರ್, 2013 ರಂದು ನಡೆದಿದ್ದ ನಾಲ್ಕನೇ ಪ್ರತಿವಾದಿ ಸಂಘದ ವ್ಯವಸ್ಥಾಪಕ ಸಮಿತಿಯ ಚುನಾವಣೆಗೆ ಅಪೀಲುದಾರನು ಸ್ಪರ್ಧಿಸಿ, ವ್ಯವಸ್ಥಾಪಕ ಸಮಿತಿಯ ನಿರ್ದೇಶಕನಾಗಿ ಚುನಾಯಿತನಾಗಿದ್ದನು.ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ರ (ಸಂಕ್ಷಿಪ್ತವಾಗಿ " 1959 ರ ಸದರಿ ಅಧಿನಿಯಮ) 29-ಸಿ ಪ್ರಕರಣವನ್ನು ಅನ್ವಯಿಸಿ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಮುಂದೆ ಒಂದು ಅರ್ಜಿಯನ್ನು ಸಲ್ಲಿಸಲಾಯಿತು.ಸದರಿ ಅರ್ಜಿಯಲ್ಲಿ, ಅರ್ಜಿದಾರನುದಿನಾಂಕ: 01 ನೇ ಅಕ್ಟೋಬರ್, 2012 ರಂದು ನಾಲ್ಕನೇ ಪ್ರತಿವಾದಿ ಸಂಘದ ಸದಸ್ಯತ್ವವನ್ನು ಪಡೆದಿದ್ದನೆಂದು ಮತ್ತು 02 ನೇ ಸೆಪ್ಟೆಂಬರ್, 2013 ರಂದು ಆತನು ನಿರ್ದೇಶಕನಾಗಿ ಆಯ್ಕೆಯಾಗಿದ್ದನೆಂದು ವಾದಿಸಲಾಗಿದೆ.1959 ರ ಸದರಿ ಅಧಿನಿಯಮದ 20 ನೇ ಪ್ರಕರಣದ ( 2) ನೇ ಉಪ-ಪ್ರಕರಣದ (ಎ-iii) ಖಂಡದ ಮೇರೆಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಅಪೀಲುದಾರನನ್ನು ಅನರ್ಹಗೊಳಿಸಲಾಗಿತ್ತು; ಆತನು ಚುನಾವಣೆಯಲ್ಲಿ ಸ್ಪರ್ಧಿಸಿದ ದಿನಾಂಕದಷ್ಟರಮಟ್ಟಿಗೆ, ನಾಲ್ಕನೇ ಪ್ರತಿವಾದಿ ಸಂಘದ ಸದಸ್ಯತ್ವ ಪಡೆದ ದಿನಾಂಕದಿಂದ ನಾಲ್ಕನೇ ಪ್ರತಿವಾದಿ-ಸಂಘದ ಸದಸ್ಯತ್ವದ ಹನ್ನೆರಡು ತಿಂಗಳುಗಳ ಅವಧಿಯನ್ನು ಆತನು ಪೂರ್ಣಗೊಳಿಸಿರಲಿಲ್ಲವೆಂದು ಸದರಿ ಅರ್ಜಿಯಲ್ಲಿ ನಿವೇದಿಸಿಕೊಳ್ಳಲಾಗಿತ್ತು.

4. 31 ನೇ ಜುಲೈ, 2017 ರ ಂ ದು ಸಹಾಯಕ ನಿಬಂಧಕರು, 20 ನೇ ಪ್ರಕರಣದ ( 2) ನೇ ಉಪ-ಪ್ರಕರಣದ (ಎ-iii) ಖಂಡವನ್ನು ಉಲ್ಲಂಘಿಸಿ ಅಪೀಲುದಾರನು ಚುನಾಯಿತನಾಗಿರುವುದರಿಂದ, 1959 ರ ಸದರಿ ಅಧಿನಿಯಮದ 29-ಸಿ ಪ್ರಕರಣದ ( 8) ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ ಆತನು ಅನರ್ಹತೆಗೆ ಒಳಗಾಗಿದ್ದಾನೆ ಎಂದು ನಿರ್ಣಯಿಸಿ ಒಂದು ಆದೇಶವನ್ನು ಹೊರಡಿಸಿದ್ದರು.ಸದರಿ ಆದೇಶವನ್ನು ಅಪೀಲುದಾರನು ಅಪೀಲಿಗೆ ಒಳಪಡಿಸಿದ್ದನು.27 ನೇ ನವೆಂಬರ್, 2017 ರ ಆದೇಶದ ಮೂಲಕ ಅಪೀಲನ್ನು ವಜಾಗೊಳಿಸಲಾಗಿತ್ತು.

5. ಮಾನ್ಯ ಏಕ ಪೀಠ ನ್ಯಾಯಾಧೀಶರ ಮುಂದೆ ಅಪೀಲುದಾರನು ಸಲ್ಲಿಸಿದ ರಿಟ್ ಅರ್ಜಿಯಲ್ಲಿ,ದಿನಾಂಕ: 31 ನೇ ಜುಲೈ, 2017 ರ ಸದರಿ ಆದೇಶವನ್ನು, ಅಷ್ಟೇ ಅಲ್ಲದೆ, 27 ನೇ ನವೆಂಬರ್, 2017 ರಂದು ಅಪೀಲನ್ನು

ವಜಾಗೊಳಿಸಿ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಲಾಗಿತ್ತು.ಮಾನ್ಯ ಏಕ ಪೀಠ ನ್ಯಾಯಾಧೀಶರು ಪ್ರಶ್ನಿತ ಆದೇಶದ ಮೂಲಕ ರಿಟ್ ಅರ್ಜಿಯನ್ನು ತಳ್ಳಿ ಹಾಕಿದ್ದರು.

6. ಅಪೀಲುದಾರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳು, 29-ಸಿ ಪ್ರಕರಣದ ( 8) ನೇ ಉಪ-ಪ್ರಕರಣವು ನಿಯಮಿಸಿದ ಅನರ್ಹತೆಯನ್ನು ಅನ್ವಯಿಸಲಾಗುವುದೇ ಇಲ್ಲವೆಂದು; ಸಹಕಾರ ಸಂಘದ ಮಂಡಳಿಯ ಸದಸ್ಯನು ಹುದ್ದೆ ವಹಿಸಿಕೊಂಡ ನಂತರ ( 8) ನೇ ಉಪ-ಪ್ರಕರಣವನ್ನು ಅಧಿನಿಯಮವು ಒಳಗೊಂಡಾಗ ಮಾತ್ರ ಸದರಿ ಅನರ್ಹತೆಯು ಅನ್ವಯವಾಗುತ್ತದೆ ಮತ್ತು ಪ್ರಸ್ತುತ ಮೊಕದ್ದಮೆಯಲ್ಲಿ, ಆರೋಪಿಸಲಾದ ಅನರ್ಹತೆಯು 20 ನೇ ಪ್ರಕರಣದ ( 2) ನೇ ಉಪ-ಪ್ರಕರಣದ (ಎ-iii) ಖಂಡದ ಅಡಿಯಲ್ಲಿ ಬರುತ್ತದೆ ಎಂದು ನಿವೇದಿಸಿಕೊಂಡಿದ್ದಾರೆ.ಅವರು, ಗೋವಿಂದಪ್ಪ ಅಲಿಯಾಸ್ ಗೋಪಾಲಪ್ಪ ವಿರುದ್ಧ ಸೋಮಶೇಖರ್ ಈಶ್ವರಪ್ಪ ಅಕಲವಾಡಿ ಮತ್ತು ಇತರರು ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ನಿರ್ಣಯವನ್ನು ಅವಲಂಬಿಸಿದ್ದಾರೆ.ಮಂಡಳಿಯ ಸದಸ್ಯನು ಚುನಾಯಿತನಾದ ನಂತರ ಕಾರನಿರ್ವಹಿಸಿದಾಗ, 29-ಸಿ ಪ್ರಕರಣವು ಅನ್ವಯವಾಗುತ್ತದೆ ಎಂದು ಸದರಿ ತೀರ್ಪಿನಲ್ಲಿ ಅಭಿಪ್ರಾಯಪಡಲಾಗಿದೆ ಎಂದು ಅವರು ನಿವೇದಿಸಿಕೊಂಡಿದ್ದಾರೆ.

7. ಆರನೇ ಪ್ರತಿವಾದಿ ಪರ ಮಾನ್ಯ ನ್ಯಾಯವಾದಿಗಳು, ಮೇಲೆ ಹೇಳಿದ ನಿರ್ಣಯದ ನಂತರ, 1959 ರ ಸದರಿ ಅಧಿನಿಯಮದ 70 ನೇ ಪ್ರಕರಣವು ತಿದ್ದುಪಡಿಯಾಗಿರುವುದರಿಂದ, ಇಂತಹ ಸ್ವರೂಪದ ಮೊಕದ್ದಮೆಯಲ್ಲಿ, 70 ನೇ ಪ್ರಕರಣವು ಅನ್ವಯವಾಗುವುದಿಲ್ಲವೆಂಬುದರ ಕಡೆ ಗಮನ ಸೆಳೆಯುವ ಮೂಲಕ ಪ್ರಶ್ನೆತ ಆದೇಶವನ್ನು ಸಮರ್ಥಿಸಿಕೊಂಡಿದ್ದಾರೆ.ಅವರು, 20 ನೇ ಪ್ರಕರಣದ ( 2) ನೇ ಉಪ-ಪ್ರಕರಣದ (ಎ-iii) ನೇ ಖಂಡದ ಕಡೆಗೆ ನಮ್ಮ ಗಮನವನ್ನು ಸೆಳೆದು, ಅಪೀಲುದಾರನು ಚುನಾವಣೆಗೆ ಸ್ಪರ್ಧಿಸಿದಾಗ, ಆತನು ಹನ್ನೆರಡು ತಿಂಗಳುಗಳ ಅವಧಿಗಾಗಿ ನಾಲ್ಕನೇ ಪ್ರತಿವಾದಿ ಸಂಘದ ಸದಸ್ಯನಾಗಿರಲಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.1959 ರ ಸದರಿ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಅಪೀಲುದಾರನು ಕಾರನಿರ್ವಹಿಸಿರುವುದರಿಂದ, 29-ಸಿ ಪ್ರಕರಣದ ( 8) ನೇ ಉಪ-ಪ್ರಕರಣದ (ಬಿ) ಖಂಡವು ನೇರವಾಗಿ ಅನ್ವಯವಾಗುತ್ತದೆಂದು ಅವರು ನಿವೇದಿಸಿಕೊಂಡಿದ್ದಾರೆ.

8. ಐದನೇ ಪ್ರತಿವಾದಿ ಪರ ಹಾಜರಾದ ಹಾಜರಾದ ಮಾನ್ಯ ಮಾನ್ಯ ನ್ಯಾಯವಾದಿಗಳು, ಅಪೀಲುದಾರನ ವಿರುದ್ಧ ತಾನು ಯಾವುದೇ ತೊಂದರೆಯನ್ನು ಹೊಂದಿರುವುದಿಲ್ಲವೆಂದು ನಿವೇದಿಸಿಕೊಂಡಿದ್ದಾರೆ.ಮಾನ್ಯ ಸಹಾಯಕ ಸರ್ಕಾರಿ ನ್ಯಾಯವಾದಿಗಳು ಅಂಗೀಕೃತ ಉಲ್ಲಂಘನೆಯಾಗಿದೆ ಎಂಬುದನ್ನು ಸೂಚಿಸುವ ಮೂಲಕ ಪ್ರಶ್ನಿತ ಆದೇಶವನ್ನು ಸಮರ್ಥಿಸಿಕೊಂಡಿದ್ದಾರೆ.

9. ನಿವೇದನೆಗಳನ್ನು ನಾವು ಜಾಗರೂಕತೆಯಿಂದ ಪರಿಶೀಲಿಸಿದ್ದೇವೆ.

10. ಈ ಹಂತದಲ್ಲಿ, ಆರನೇ ಪ್ರತಿವಾದಿ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು, 29-ಸಿ ಪ್ರಕರಣದ ( 1) ನೇ ಉಪ-ಪ್ರಕರಣದ (ಹೆಚ್) ಖಂಡವನ್ನು ಅವಲಂಬಿಸಿದ್ದಾರೆ.ಅವರು, ಸದರಿ ಖಂಡದ ಅಭಿಪ್ರಾಯದಲ್ಲಿ, ಅಪೀಲುದಾರನು ಚುನಾಯಿತನಾಗಲು ಅರ್ಹನಿರಲಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ಈ ಕಾರಣದ ಮೇರೆಗೆ ಸಹಾಯಕ ನಿಬಂಧಕರ ಆದೇಶವನ್ನು ಅಪೀಲು ಪ್ರಾಧಿಕಾರವು ಸಮರ್ಥಿಸಿರುವುದಿಲ್ಲವೆಂದು ಅವರು ನಿವೇದಿಸಿಕೊಂಡಿದ್ದಾರೆ.

11. 29-ಸಿ ಪ್ರಕರಣವನ್ನು ಪ್ರಸ್ತಾಪಿಸುವುದು ಅವಶ್ಯಕವಾಗಿದ್ದು, ಅದನ್ನು ಈ ಕೆಳಗಿನಂತೆ ಓದಲಾಗಿದೆ:

29 ಸಿ. ಸಮಿತಿಯ ಸದಸ್ಯತ್ವಕ್ಕೆ ಅನರ್ಹತೆಗಳು.- ( 1) ಯಾರೇ ವ್ಯಕ್ತಿಯು ಯಾವುದೇ ಸಹಕಾರ ಸಂಘದ ಸಮಿತಿಯ ಸದಸ್ಯನಾಗಿ ಮು0ದುವರಿಯಲು

(ಎ) ಋಣಿಯಾಗಿ ತನ್ನಿಂದ ಸಲ್ಲಬೇಕಾದ ಯಾವುದೇ ಬಾಕಿಗಳ ಸಂಬಂಧದಲ್ಲಿ ಅವನು ಆ ಸಂಘ ಅಥವಾ ಇತರ ಯಾವುದೇ ಸಹಕಾರ ಸಂಘಕ್ಕೆ ಸುಸ್ತಿದಾರನಾಗಿದ್ದರೆ;

(ಬಿ) ಅಂಥ ಸಹಕಾರ ಸಂಘದೊಂದಿಗೆ ಮಾಡಿಕೊಂಡ ಯಾವುದೇ ಕರಾರಿನಲ್ಲಿ ಅಥವಾ ಅಂಥ ಸಹಕಾರ ಸಂಘವು ಖಾಸಗಿಯಾಗಿ ಅಥವಾ ಹರಾಜಿನಲ್ಲಿ ಮಾಡಿದ ಮಾರಾಟ ಅಥವಾ ಖರೀದಿಯಲ್ಲಿ ಅಥವಾ ಆ ಕರಾರು, ಮಾರಾಟ, ಖರೀದಿ ಅಥವಾ ವಹಿವಾಟಿನಲ್ಲಿ (ಬಂಡವಾಳ ಹೂಡಿಕೆ ಮತ್ತು ಸಾಲ ಪಡೆಯುವುದನ್ನು ಬಿಟ್ಟು) ಹಣಕಾಸಿನ ಹಿತಾಸಕ್ತಿಗಳನ್ನು ಒಳಗೊಂಡ ಸಹಕಾರ ಸಂಘದ ಯಾವುದೇ ಕರಾರಿನಲ್ಲಿ ಅಥವಾ ವಹಿವಾಟಿನಲ್ಲಿ ಅವನು ನೇರವಾಗಿ ಅಥವಾ ಪರೋಕ್ಷವಾಗಿ ಹಿತಾಸಕ್ತಿ ಹೊಂದಿದ್ದರೆ;

(ಸಿ) ಅಂಥ ಸಹಕಾರ ಸಂಘವು ನಡೆಸುತ್ತಿರುವ ಅಥವಾ ಸಹಕಾರ ಸಂಘದ ಯಾವ ಸಹಕಾರ ಸಂಘವು ಸದಸ್ಯನಾಗಿರುವುದೋ ಆ ಸಹಕಾರ ಸಂಘವು ನಡೆಸುತ್ತಿರುವ ಅದೇ ಸ್ವರೂಪದ ವ್ಯವಹಾರವನ್ನು ಅವನು ನಡೆಸುತ್ತಿದ್ದರೆ;

(ಡಿ) ಅಂಥ ಸಹಕಾರ ಸಂಘದ ಪರವಾಗಿ ನ್ಯಾಯವಾದಿಯಾಗಿ ನೇಮಕಗೊಂಡರೆ ಅಥವಾ ಅಂಥ ಸಹಕಾರ ಸಂಘದ ವಿರುದ್ಧ ನ್ಯಾಯವಾದಿಯಾಗಿ ನಿಯೋಜನೆಯನ್ನು ಸ್ವೀಕರಿಸಿದರೆ;

(ಇ) ಅವನು ಅಂಥ ಸಹಕಾರ ಸಂಘದ ಅಥವಾ ಅದರ ಹಣಕಾಸು ಬ್ಯಾಂಕಿನ ವೇತನ ಪಡೆಯುವ ಮುಖ್ಯ [ಕಾರ್ಯನಿರ್ವಾಹಣಾಧಿಕಾರಿಯ ಹೊರತಾಗಿ ಇತರ] ನೌಕರನಾಗಿದ್ದರೆ;

(ಎಫ್) ಅವನು ಅಂಥ ಸಹಕಾರ ಸಂಘದ ವೇತನ ಪಡೆಯುವ ನೌಕರನ ಹತ್ತಿರದ ಸಂಬಂಧಿಯಾಗಿದ್ದರೆ - ಅರ್ಹನಾಗತಕ್ಕದ್ದಲ್ಲ.

ವಿವರಣೆ.- ಈ ಖಂಡದ ಉದ್ದೇಶಕ್ಕಾಗಿ ' ಹತ್ತಿರದ ಸಂಬಂಧಿ ' ಎ ೦ ದರೆ,

(i) ಗಂಡ, ಹೆಂಡತಿ ಮತ್ತು ಅವಿವಾಹಿತ ಮಗಳು;

(ii) ತಂದೆ, ತಾಯಿ, ಅವಿಭಕ್ತ ಮಗ, ಅವಿಭಕ್ತ ಸಹೋದರ ಮತ್ತು ಅವಿವಾಹಿತ ಸಹೋದರಿ; ಮತ್ತು

(iii) ಹತ್ತಿರದ ಸಂಬಂಧಿಗಳೆಂದು ನಿಯಮಿಸಬಹುದಾದಂಥ ಇತರ ಸಂಬಂಧಿಕರು.

(ಜಿ) ಅವನು ಸಹಕಾರ ಸ ೦ ಘದ ವೇತನ ಪಡೆಯುವ ನೌಕರನಾಗಿದ್ದು, ಅವನನ್ನು ಸಹಕಾರ ಸಂಘದ ಸೇವೆಯಿಂದ ವಜಾ ಮಾಡಲಾಗಿದ್ದರೆ, ತೆಗೆದುಹಾಕಲಾಗಿದ್ದರೆ ಅಥವಾ ಕಡ್ಡಾಯ ನಿವೃತ್ತಿಗೊಳಿಸಲಾಗಿದ್ದರೆ;

(ಹೆಚ್) ಅವನು ಸಂಘದ ಸದಸ್ಯನಾಗಿರುವುದರಿಂದ ಅಥವಾ ಅಂಥ ಸದಸ್ಯನಾಗಿ ಮತ ಚಲಾಯಿಸುವುದರಿಂದ ಅನರ್ಹನಾಗಿದ್ದರೆ:

(ಐ) ಅವನು 1960 ರ ದಂಡ ಸಂಹಿತೆಯ (ಕೇಂದ್ರ ಅಧಿನಿಯಮ 1860 ರ 45) 153 ಎ ಪ್ರಕರಣ ಅಥವಾ 171 ಇ ಪ್ರಕರಣ ಅಥವಾ 171 ಎಫ್ ಪ್ರಕರಣ ಅಥವಾ 505 ನೇ ಪ್ರಕರಣದ ಕರ್ನಾಟಕ ತೀರ್ಪುಗಳ ವರದಿ 2021

(2) ನೇ ಉಪ-ಪ್ರಕರಣದ ಅಥವಾ ( 3) ನೇ ಉಪ-ಪ್ರಕರಣದ ಮೇರೆಗೆ ಅಥವಾ ಈ ಅಧಿನಿಯಮದ 39 ಜೆ ಪ್ರಕರಣದ ಅಥವಾ 39 ಕೆ ಪ್ರಕರಣದ ( 2) ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ ದಂಡನೀಯವಾದ ಒಂದು ಅಪರಾಧಕ್ಕಾಗಿ ಸಿದ್ಧದೋಷಿಯಾಗಿದ್ದರೆ ಹಾಗೆ ದೋಷ ಸಿದ್ಧಿಯಾದ ದಿನಾಂಕದಿಂದ ಆರು ವರ್ಷಗಳ ಅವಧಿ ಕಳೆದ ಹೊರತು;

(ಜೆ) ಅವನು, ಭಾರತದ ನ್ಯಾಯಾಲಯದಿಂದ ಯಾವುದೇ ಅಪರಾಧಕ್ಕಾಗಿ ಸಿದ್ಧದೋಷಿಯಾಗಿದ್ದು ಎರಡು ವರ್ಷಗಳಿಗಿಂತ ಕಡಿಮೆಯಿಲ್ಲದ ಅವಧಿಗೆ ಕಾರಾವಾಸ ಶಿಕ್ಷೆಗೆ ಒಳಗಾಗಿದ್ದರೆ, ಅವನ ಬಿಡುಗಡೆಯ ದಿನಾಂಕದಿಂದ ಐದು ವರ್ಷಗಳ ಅವಧಿ ಕಳೆದ ಹೊರತು;

(ಕೆ) ಅವನು 39 ಸಿ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಭ್ರಷ್ಟಾಚಾರದ ದೋಷಿಯಾಗಿದ್ದರೆ, ಆ ಅಪರಾಧದ ದೋಷಿಯಾದ ದಿನಾಂಕದಿಂದ ಆರು ವರ್ಷಗಳ ಅವಧಿ ಕಳೆದ ಹೊರತು;

(ಎಲ್) ಅವನು ಈ ಅಧಿನಿಯಮದ ಉಪಬಂಧಗಳು, ನಿಯಮಗಳು ಅಥವಾ ಉಪ-ವಿಧಿಗಳನ್ನು ಉಲ್ಲಂಘಿಸಿ ಯಾವುದೇ ಸಹಕಾರ ಸಂಘದ ಯಾವುದೇ ಮೊತ್ತವನ್ನು (ಸಾಲದ ಹೊರತು) ಅವನಲ್ಲೇ ಇಟ್ಟುಕೊಂಡಿದ್ದು ಜಮೆ ಮಾಡಲು ವಿಫಲನಾಗಿದ್ದರೆ;

(ಎಂ) ಅವನು ಒಂದು ಹಣಕಾಸು ನೀಡಿಕೆ ಬ್ಯಾಂಕಿಗೆ ಅಥವಾ ಅವನು ಪ್ರತಿನಿಧಿಸುವ ಸಹಕಾರ ಸಂಘದಿಂದ ಇರುವ ಬಾಕಿಗಳ ಸಂಬಂಧದಲ್ಲಿ ಯಾವುದೇ ಸಹಕಾರ ಸಂಘಕ್ಕೆ ಸತತವಾಗಿ ಒಂದು ವರ್ಷದವರೆಗೆ ಸುಸ್ತಿದಾರನಾಗಿದ್ದರೆ

-ಅರ್ಹನಾಗತಕ್ಕದ್ದಲ್ಲ:

ಪರಂತು, ಸಮಿತಿಯ ಸದಸ್ಯನಾಗಿ ಮುಂದುವರಿಯಲು ಈ ಖ ೦ ಡದ ಮೇರೆಗಿನ ಅನರ್ಹತೆಯು, ಅಂಥ ಬಾಕಿಗಳ ಶೇಕಡ ಮೂವತ್ತರಷ್ಟು ಮೊತ್ತವನ್ನು ಮೀರದಂತಹ ಮೊತ್ತವನ್ನು ಸಂದಾಯ ಮಾಡುವ ಸುಸ್ತಿದಾರ ಸಹಕಾರ ಸಂಘಕ್ಕೆ ಅನ್ವಯವಾಗತಕ್ಕದ್ದು;

(ಎನ್) ಅವನು 39 ಎ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಕಾಲಮಿತಿಯೊಳಗೆ ಚುನಾವಣೆಗೆ ವ್ಯವಸ್ಥೆ ಮಾಡುವಲ್ಲಿ ವಿಫಲನಾಗಿರುವ ಸಮಿತಿಯ ಸದಸ್ಯನಾಗಿದ್ದರೆ -ಅರ್ಹನಾಗತಕ್ಕದ್ದಲ್ಲ.

( ಓ)

*** ***

(ಪಿ) ಅವನು ಗೈರುಹಾಜರಾಗಲು ಅನುಮತಿ ಪಡೆಯದೆ ಅಂಥ ಸ ೦ ಘದ ಮ ೦ ಡಲಿಯ ಮೂರು ನಿರ ೦ ತರ ಸಭೆಗಳಿಗೆ ಗೈರುಹಾಜರಾದರೆ,

-ಅರ್ಹನಾಗತಕ್ಕದ್ದಲ್ಲ.

(2) ಯಾವೊಂದು ಸಹಕಾರ ಸಂಘವು ಸದಸ್ಯನಾಗಿರುವ ಇತರ ಸಹಕಾರ ಸಂಘದ ಸಮಿತಿಯ ಸದಸ್ಯನಾಗಿ ಚುನಾಯಿತನಾಗಿರುವ ವ್ಯಕ್ತಿಯೂ ಸೇರಿ, ಯಾರೇ ವ್ಯಕ್ತಿಯು ಎರಡು ಸಹಕಾರ ಸಂಘಗಳಿಗಿಂತ ಹೆಚ್ಚು ಸಹಕಾರ ಸಂಘಗಳಿಗೆ [ಅಧ್ಯಕ್ಷ ಅಥವಾ ಚ ಸಭಾಧ್ಯಕ್ಷ, ಉಪಾಧ್ಯಕ್ಷ ಅಥವಾ ಉಪಸಭಾಧ್ಯಕ್ಷ ಅಥವಾ ಇತರ ಪದಾಧಿಕಾರಿ] ಆಗಿರತಕ್ಕದ್ದಲ್ಲ.

(3) ಸಹಕಾರ ಸಂಘದ ಮಂಡಳಿಯು

(ಎ) 39 ಎ ಪ್ರಕರಣ ಮತ್ತು 29 ಎಫ್ ಪ್ರಕರಣದ ಪ್ರಕಾರ ಚುನಾವಣೆಗಳನ್ನು ನಡೆಸಲು ಸಹಕಾರಿ ಚುನಾವಣಾ ಆಯೋಗಕ್ಕೆ ನೆರವಾಗಲು ವಿಫಲವಾದರೆ; ಅಥವಾ

(ಬಿ) 27 ನೇ ಪ್ರಕರಣದ ಅಡಿಯಲ್ಲಿ ವಾರ್ಷಿಕ ಮಹಾಸಭೆಯನ್ನು ಅಥವಾ ಅಗತ್ಯವಾಗಿರುವಾಗ 28 ನೇ ಪ್ರಕರಣದ ಅಡಿಯಲ್ಲಿ ವಿಶೇಷ ಮಹಾಸಭೆಯನ್ನು ಕರೆಯಲು ವಿಫಲವಾದರೆ; ಅಥವಾ

(ಸಿ) ವಾರ್ಷಿಕ ಮಹಾಸಭೆಯಲ್ಲಿ ಪರಿಶೋಧಿತ ಲೆಕ್ಕಪತ್ರಗಳನ್ನು ಮತ್ತು ವಾರ್ಷಿಕ ವರದಿಯನ್ನು ಮಂಡಿಸಲು ವಿಫಲವಾದರೆ,

ಹಾಗೆ ವಿಫಲವಾದ ಮಂಡಳಿಯ ಪ್ರತಿಯೊಬ್ಬ ಸದಸ್ಯನು, ಅನರ್ಹತೆಯ ಆದೇಶದ ದಿನಾ ಂ ಕದಿ ಂ ದ ಐದು ವರ್ಷಗಳ ಅವಧಿಯವರೆಗೆ ಸ ಂ ಘದ ಮಂಡಳಿಯ ಸದಸ್ಯನಾಗಿ ಚುನಾಯಿತನಾಗಿರಲು, ಅಥವಾ ನೇಮಕಗೊಳ್ಳಲು ಅಥವಾ ಮುಂದುವರೆಯಲು ಅನರ್ಹನಾಗತಕ್ಕದ್ದು.

( 4) ( 2) ನೇ ಉಪಪ್ರಕರಣದಲ್ಲಿ ಇರುವುದು ಯಾವುದೂ,

(i) ರಾಜ್ಯ ಸರ್ಕಾರವು ಅಥವಾ ರಿಜಿಸ್ಟ್ರಾರನು, ಅಧ್ಯಕ್ಷನನ್ನಾಗಿ ಅಥವಾ ಸಭಾಧ್ಯಕ್ಷನನ್ನಾಗಿ, ಉಪಾಧ್ಯಕ್ಷನನ್ನಾಗಿ ಅಥವಾ ಉಪಸಭಾಧ್ಯಕ್ಷನನ್ನಾಗಿ ನೇಮಿಸಿದ ಯಾರೇ ವ್ಯಕ್ತಿಗೆ; ಅಥವಾ

(ii) ಸಮಿತಿಯ ಸದಸ್ಯ ಮಾತ್ರ ಆಗಿರುವ ಯಾರೇ ವ್ಯಕ್ತಿಗೆ

ಅನ್ವಯವಾಗತಕ್ಕದ್ದಲ್ಲ.

(5) ಸಹಕಾರ ಮಾರುಕಟ್ಟೆ ಸಂಘಗಳು, ಗ್ರಾಹಕರ ಸಹಕಾರ ಸಂಘಗಳು ಮತ್ತು ರಾಜ್ಯ ಸರ್ಕಾರವು ರಾಜ್ಯ ಪತ್ರದಲ್ಲಿ ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸಹಕಾರ ಸಂಘಗಳ ವರ್ಗ ಅಥವಾ ವರ್ಗಗಳ ಸಂದರ್ಭದಲ್ಲಿ, ಯಾರೇ ವ್ಯಕ್ತಿಯು ಸಹಕಾರ ಸಂಘದೊಂದಿಗೆ ಅವನ ವ್ಯವಹಾರಗಳಿಗೆ ಸಂಬಂಧಿಸಿ ಅಂಥ ಅಧಿಸೂಚನೆಯಲ್ಲಿ ಕಾಲಕಾಲಕ್ಕೆ ನಿರ್ದಿಷ್ಟಪಡಿಸಬಹುದಾದಂಥ ಹಣಕಾಸು ಮಿತಿಗಳಿಗೆ ಸಂಬಂಧಿಸಿದ ಕನಿಷ್ಠ ಷರತ್ತುಗಳನ್ನು ಪಾಲಿಸಿದ ಹೊರತು, ಅವನು ಅಂಥ ಸಹಕಾರ ಸಂಘದ ಸಮಿತಿಯ ಸದಸ್ಯನಾಗಿ ನೇಮಕಗೊಳ್ಳಲು ಅಥವಾ ಆಯ್ಕೆಯಾಗಲು ಅರ್ಹನಾಗತಕ್ಕದ್ದಲ್ಲ.

( 6) ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಅಥವಾ ಅಪೆಕ್ಸ್ ಸಹಕಾರ ಬ್ಯಾಂಕು ಅಥವಾ ನಿಯಮಿಸಬಹುದಾದಂಥ ಇತರ ವರ್ಗಗಳ ಸಹಕಾರ ಬ್ಯಾಂಕುಗಳ ಸಮಿತಿಗಳಲ್ಲಿ ವ್ಯಕ್ತಿ ಸದಸ್ಯರ ಯಾರೇ ಪ್ರತಿನಿಧಿಯು ಇರತಕ್ಕುದಲ್ಲ.

( 7) ಸಮಿತಿಯ ಯಾವೊಬ್ಬ ಸದಸ್ಯನು ಈ ಪ್ರಕರಣದಲ್ಲಿ ನಮೂದಿಸಿದ ಅನರ್ಹತೆಗಳಲ್ಲಿ ಯಾವುದೇ ಒಂದಕ್ಕೆ ಗುರಿಯಾಗಿದ್ದರೆ ಅಥವಾ ಗುರಿಯಾಗಿರುವನೇ ಎಂಬ ಯಾವುದೇ ಪ್ರಶ್ನೆಯನ್ನು ರಿಜಿಸ್ಟ್ರಾರನು ಸಂಬಂಧಪಟ್ಟ ವ್ಯಕ್ತಿಗೆ ಸುನಾವಣೆಯ ಸೂಕ್ತ ಅವಕಾಶವನ್ನು ನೀಡಿದ ತರುವಾಯ ನಿರ್ಧರಿಸತಕ್ಕುದು.

(8) ಸಹಕಾರ ಸಂಘದ ಸಮಿತಿಯ ಯಾರೇ ಸದಸ್ಯನು ಅವನ ಅಧಿಕಾರ ಅವಧಿಯಲ್ಲಿ,

(ಎ) ಅವನು (1), (2) ಮತ್ತು (5) ನೇ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಅನರ್ಹತೆಗಳಿಗೊಳಪಟ್ಟರೆ; ಅಥವಾ

(ಬಿ) ಅವನು, ಈ ಅಧಿನಿಯಮದ ನಿಯಮಗಳ ಅಥವಾ ಸಹಕಾರ ಸಂಘದ ಉಪವಿಧಿಗಳ ಉಪಬಂಧಗಳನ್ನು ಉಲ್ಲಂಘಿಸಿ ಮೋಸದಿಂದ ಅಥವಾ ಪೂರ್ಣ ನಿರ್ಲಕ್ಷದಿಂದ ಅಥವಾ ಮಂಜೂರಾತಿಯ ಅಗತ್ಯವಿರುವಾಗ, ಸಹಕಾರ ಸಂಘದ ಸಮಿತಿಯ ಮಂಜೂರಾತಿ ಇಲ್ಲದೆ ಅಥವಾ ಸಹಕಾರ ಸಂಘದ ಅಥವಾ ಅದರ ಸಮಿತಿಯ ನಿರ್ಣಯಗಳಿಗೆ ವಿರುದ್ಧವಾಗಿ ಅಥವಾ ಸಹಕಾರ ಸಂಘದ ಹಿತಾಸಕ್ತಿಗೆ ಬಾಧಕವಾಗುವಂತೆ ಯಾವುದೇ ರೀತಿಯಲ್ಲಿ ವರ್ತಿಸಿದ್ದರೆ ಅಥವಾ ವರ್ತಿಸುತ್ತಿದ್ದರೆ; ಅಥವಾ

(ಸಿ) ಅವನು ನಿರಂತರವಾಗಿ ಈ ಅಧಿನಿಯಮದ ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಹೊರಡಿಸಲಾದ ನಿರ್ದೇಶಗಳ ಅಥವಾ ಆದೇಶಗಳ ವಿರುದ್ಧವಾಗಿ ವರ್ತಿಸಿದ್ದರೆ ಅಥವಾ ವರ್ತಿಸುತ್ತಿದ್ದರೆ; ಅಥವಾ

(ಡಿ) ಅವನು ತನ್ನ ಕರ್ತವ್ಯಗಳನ್ನು ತೃಪ್ತಿಕರವಾಗಿ ನಿರ್ವಹಿಸುತ್ತಿಲ್ಲದಿದ್ದರೆ, ರಿಜಿಸ್ಟ್ರಾರನು ತನಗೆ ಬಂದ ವರದಿಯ ಮೇರೆಗೆ ಅಥವಾ ಅನ್ಯಥಾ ಅಂತಹ ಸದಸ್ಯನನ್ನು ಆದೇಶದ ಮೂಲಕ ತೆಗೆದುಹಾಕಬಹುದು ಮತ್ತು ಈ ಉಪ-ಪ್ರಕರಣದ ( ಎ), (ಬಿ), (ಸಿ) ಮತ್ತು (ಡಿ) ಖಂಡಗಳಲ್ಲಿ ಹೇಳಿರುವ ವಿಷಯಗಳ ಬಗ್ಗೆ ಅಂಥ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಐದು ವರ್ಷಗಳಿಗೆ ಮೀರದಂಥ ಅವಧಿಯವರೆಗೆ ಸಹಕಾರ ಸಂಘದ ಯಾವುದೇ ಪದವನ್ನು ಹೊಂದದಂತೆ ಅವನನ್ನು ಅನರ್ಹಗೊಳಿಸಬಹುದು:

ಪರಂತು, ಯಾರ ವಿರುದ್ಧ ಈ ಆದೇಶವನ್ನು ಮಾಡಲಾಗಿದೆಯೋ ಆ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶ ನೀಡಿದ ಹೊರತು ಈ ಉಪ-ಪ್ರಕರಣದ ಮೇರೆಗೆ ಯಾವ ಆದೇಶವನ್ನು ಮಾಡತಕ್ಕದ್ದಲ್ಲ.

(9) (8) ನೇ ಉಪ-ಪ್ರಕರಣದ ಮೇರೆಗೆ ಮಾಡಿದ ಆದೇಶದ ಒಂದು ಪ್ರತಿಯನ್ನು ಸಂಬಂಧಪಟ್ಟ ಸದಸ್ಯನಿಗೆ ಮತ್ತು ಸಹಕಾರ ಸಂಘಕ್ಕೆ ಕಳುಹಿಸತಕ್ಕದ್ದು.

(10) ಸಹಕಾರ ಸ ಂ ಘದ ಯಾವೊಬ್ಬ ನಿರ್ದೇಶಕನು, ( 1) ನೇ ಉಪ ಪ್ರಕರಣದಲ್ಲಿ ಹೇಳಲಾದ ಯಾವುದೇ ಅನರ್ಹತೆಗೆ ಗುರಿಯಾದರೆ, ಅವನು ಇನ್ನೊಂದು ಸಂಘದ ನಿಯೋಗಿಯಾಗಿ ಚುನಾಯಿತನಾಗಿರಲು ಅರ್ಹನಾಗತಕ್ಕದ್ದಲ್ಲ.( 8) ನೇ ಉಪ ಪ್ರಕರಣದ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(11) ಒಂದು ಸಹಕಾರ ಸಂಘದ ಯಾವೊಬ್ಬ ಸದಸ್ಯನು ( 1) ನೇ ಉಪ ಪ್ರಕರಣದ (ಎಂ) ಮತ್ತು (ಎನ್) ಖಂಡಗಳನ್ನು ಹೊರತುಪಡಿಸಿ, ಸದರಿ ಉಪ ಪ್ರಕರಣದಲ್ಲಿ ಹೇಳಲಾದ ಯಾವುದೇ ಅನರ್ಹತೆಗೆ ಗುರಿಯಾಗಿದ್ದರೆ, ಅವನು, ಪ್ರತಿನಿಧಿಯಾಗಿ ಚುನಾಯಿತನಾಗಲು ಅಥವಾ ನೇಮಕಗೊಳ್ಳಲು ಅಥವಾ

ಮುಂದುವರೆಯಲು ಅರ್ಹನಾಗತಕ್ಕದಲ್ಲ.( 8) ನೇ ಉಪ ಪ್ರಕರಣದ ಉಪ ಬ ೦ ಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

(ಒತ್ತು ನೀಡಲಾಗಿದೆ)

12. 29-ಸಿ ಪ್ರಕರಣದ ( 1) ನೇ ಉಪ-ಪ್ರಕರಣವು, ಮಂಡಳಿಯ ಸದಸ್ಯತ್ವಕ್ಕೆ ಅನರ್ಹತೆಯನ್ನು ವಿಧಿಸಿದೆ.ಅದರ (ಹೆಚ್) ಖಂಡವು, ಯಾರೇ ವ್ಯಕ್ತಿಯು ಸಂಘದ ಸದಸ್ಯನಾಗಲು ಅಥವಾ ಅಂಥ ಸದಸ್ಯನಾಗಿ ಮತ ಚಲಾಯಿಸಲು ಅನರ್ಹಗೊಂಡರೆ, ಆತನು ಮಂಡಳಿಯ ಸದಸ್ಯನಾಗಿ ಚುನಾಯಿತನಾಗಲು ಅಥವಾ ನೇಮಕ ಹೊಂದಲು ಅಥವಾ ಮುಂದುವರಿಯಲು ಅರ್ಹನಾಗಿರತಕ್ಕದ್ದಲ್ಲವೆಂದು ವಿಧಿಸಿದೆ.( 2) ರಿಂದ ( 6) ರವರೆಗಿನ ಉಪ-ಪ್ರಕರಣಗಳು ಅನ್ವಯವಾಗುವುದಿಲ್ಲ.ಸಹಾಯಕ ನಿಬಂಧಕರ ಆದೇಶವನ್ನು, ನಿರ್ದಿಷ್ಟವಾಗಿ 29-ಸಿ ಪ್ರಕರಣದ ( 8) ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಲಾಗಿದೆ.( 8) ನೇ ಉಪ-ಪ್ರಕರಣದ ಅಡಿಯಲ್ಲಿ, ( ಎ), (ಬಿ), (ಸಿ) ಮತ್ತು (ಡಿ) ಖಂಡಗಳ ಅಡಿಯಲ್ಲಿ ಬರುವ ಮೊಕದ್ದಮೆಗಳಲ್ಲಿ, ಐದು ವರ್ಷಗಳನ್ನು ಮೀರದಂಥ ಅವಧಿಗಾಗಿ ಸಹಕಾರ ಸಂಘದಲ್ಲಿ ಯಾವುದೇ ಹುದ್ದೆಯನ್ನು ಹೊಂದುವುದರಿಂದ ಮಂಡಳಿಯ ಸದಸ್ಯನನ್ನು ಅನರ್ಹಗೊಳಿಸುವ ಅಧಿಕಾರವನ್ನು ನಿಬಂಧಕರು ಹೊಂದಿದ್ದಾರೆ.( 8) ನೇ ಉಪ-ಪ್ರಕರಣಕ್ಕೆ ಸಂಬಂಧಪಡುವಷ್ಟರಮಟ್ಟಿಗೆ, ಅದರ ಸರಳ ಓದುವಿಕೆಯಿಂದ, ಮಂಡಳಿಯ ಅಥವಾ ಸಹಕಾರ ಸಂಘದ ಯಾರೇ ಸದಸ್ಯನು, ತನ್ನ ಪದಾವಧಿಯಲ್ಲಿ, ( 1) ನೇ, ( 2) ನೇ ಮತ್ತು ( 5) ನೇ ಉಪ-ಪ್ರಕರಣಗಳಲ್ಲಿ ನಿರ್ದಿಷ್ಟಪಡಿಸಿದಂತೆ ಯಾವುದೇ ಅನರ್ಹತೆಗೆ ಒಳಪಟ್ಟರೆ ಅಥವಾ ( 8) ನೇ ಉಪ-ಪ್ರಕರಣದ (ಬಿ) ಯಿಂದ (ಡಿ) ವರೆಗಿನ ಖಂಡಗಳು ಅನ್ವಯವಾಗುವ ಕೃತ್ಯಗಳನ್ನು ಎಸಗಿದರೆ, ಅದು ಅನ್ವಯವಾಗುತ್ತದೆ.ಹಾಗಾಗಿ, ( 8) ನೇ ಉಪ-ಪ್ರಕರಣದ ಸರಳ ಓದುವಿಕೆಯಿಂದ, ಮಂಡಳಿಯ ಸದಸ್ಯನು ತನ್ನ ಪದಾವಧಿಯಲ್ಲಿ ಅದರ (ಬಿ) ಯಿಂದ (ಡಿ) ವರೆಗಿನ ಖಂಡಗಳಲ್ಲಿನ ಅನರ್ಹತೆಗೆ ಒಳಗಾದಾಗ ಅಥವಾ ಸದರಿ ಖಂಡಗಳು ವ್ಯಾಪ್ತವಾಗುವ ಕೃತ್ಯಗಳನ್ನು ಎಸಗಿದಾಗ, ಅದು ಅನ್ವಯವಾಗುತ್ತದೆ.ಹಾಗಾಗಿ, ( 8) ನೇ ಉಪ-ಪ್ರಕರಣವು, ಸದಸ್ಯನ ಚುನಾವಣೆಗೆ ಮುಂಚೆ ಎಸಗಿದ ಕೃತ್ಯಗಳಿಗೆ ಅಥವಾ ಉಂಟಾದ ಅನರ್ಹತೆಗೆ ಅನ್ವಯವಾಗುವುದಿಲ್ಲ.

13. ಪ್ರಸ್ತುತ ಮೊಕದ್ದಮೆಯಲ್ಲಿ, ಅಪೀಲುದಾರನ ವಿರುದ್ಧ ಮಾಡಲಾದ ಆರೋಪಗಳಿದ್ದರೂ ಸಹ, ಆತನು 29-ಸಿ ಪ್ರಕರಣದ ( 1) ನೇ, ( 2) ನೇ ಮತ್ತು (5) ನೇ ಉಪ-ಪ್ರಕರಣಗಳ ಅಡಿಯಲ್ಲಿ ಅನರ್ಹತೆಗೆ ಒಳಗಾಗಿರಲಿಲ್ಲ ಮತ್ತು ನಾಲ್ಕನೇ ಪ್ರತಿವಾದಿಯ ನಿರ್ದೇಶಕನಾಗಿ ತನ್ನ ಪದಾವಧಿಯಲ್ಲಿ ( 8) ನೇ ಉಪ-ಪ್ರಕರಣದ (ಬಿ) ಯಿಂದ (ಡಿ) ವರೆಗಿನ ಖಂಡಗಳು ವ್ಯಾಪ್ತವಾಗುವ ಯಾವುದೇ ಕೃತ್ಯಗಳನ್ನು ಆತನು ಎಸಗಿರಲಿಲ್ಲ.ಸಹಾಯಕ ನಿಬಂಧಕರ ಮುಂದೆ ಸಲ್ಲಿಸಿದ ಅರ್ಜಿಯಲ್ಲಿ ಸಹ ಅದು ಆರೋಪವಾಗಿರುವುದಿಲ್ಲ.ಆದುದರಿಂದ, ( 8) ನೇ ಉಪ-ಪ್ರಕರಣವು ಅನ್ವಯವಾಗುವುದೇ ಇಲ್ಲ. ( 8) ನೇ ಉಪ-ಪ್ರಕರಣವು, ಸಹಕಾರ ಸಂಘದ ಮಂಡಳಿಯ ಸದಸ್ಯನ ಪದಾವಧಿಯು ಪ್ರಾರಂಭವಾಗುವುದಕ್ಕೆ ಮುಂಚೆ ಒಳಗಾದ ಅನರ್ಹತೆಗೆ ಅನ್ವಯವಾಗುವುದಿಲ್ಲ.ಅದು, ಸಹಕಾರ ಸಂಘದ ಮಂಡಳಿಯ ಯಾರೇ ಸದಸ್ಯನ ಪದಾವಧಿಯಲ್ಲಿ ಒಳಗಾದ ಅನರ್ಹತೆಗೆ ಮತ್ತು ಎಸಗಿದ ಕೃತ್ಯಕ್ಕೆ ಅನ್ವಯವಾಗುವುದು.20 ನೇ ಪ್ರಕರಣದ (2) ನೇ ಉಪ-ಪ್ರಕರಣದ (ಎ-iii) ನೇ ಖಂಡದ ಅಭಿಪ್ರಾಯದಲ್ಲಿ ಅಪೀಲುದಾರನು, ನಾಲ್ಕನೇ ಪ್ರತಿವಾದಿಯ ಸದಸ್ಯತ್ವ ಮಂಜೂರಾದ ದಿನಾಂಕದಿಂದ ಒಂದು ವರ್ಷ ಪೂರ್ಣಗೊಳಿಸಿರದಿದ್ದರಿಂದ ಮತ ಚಲಾಯಿಸುವುದರಿಂದ ಆತನನ್ನು ಅನರ್ಹಗೊಳಿಸಲಾಗಿತ್ತು ಎಂಬುದು ಆತನ ವಿರುದ್ಧದ ಆರೋಪವಾಗಿದೆ.

14. ಸಹಾಯಕ ನಿಬಂಧಕರ ಪ್ರಶ್ನಿತ ಆದೇಶವನ್ನು ಅವಲೋಕಿಸಲಾಗಿ, ಅವರು 1959 ರ ಸದರಿ ಅಧಿನಿಯಮದ 29-ಸಿ ಪ್ರಕರಣದ (8) ನೇ ಉಪ-ಪ್ರಕರಣದ ಅಡಿಯಲ್ಲಿ ಅಧಿಕಾರ ಚಲಾಯಿಸುವ ಮೂಲಕ ಅಪೀಲುದಾರನನ್ನು ಅನರ್ಹಗೊಳಿಸಿದ್ದಾರೆ.

15. ಅಪೀಲುದಾರನ ಚುನಾವಣೆಯನ್ನು ಪ್ರಶ್ನಿಸಿದ ಚುನಾವಣಾ ವಿವಾದವು ಇತ್ಯರ್ಥದಲ್ಲಿದೆ.29-ಸಿ ಪ್ರಕರಣದ ( 8) ನೇ ಉಪ-ಪ್ರಕರಣದ ಸರಳ ಓದುವಿಕೆಯಿಂದ, ವಾಸ್ತವಿಕವಾಗಿಯೇ, ಚುನಾವಣೆಗೆ ಮೊದಲು ( 1) ನೇ ಉಪ-ಪ್ರಕರಣದಲ್ಲಿನ ಯಾವುದೇ ಉಪ-ಖಂಡಗಳು ಅನ್ವಯವಾಗುವ ವ್ಯಕ್ತಿಯನ್ನು ಅನರ್ಹಗೊಳಿಸುವ ಅಧಿಕಾರವಿಲ್ಲ.ನಾಲ್ಕನೇ ಪ್ರತಿವಾದಿ ಸಂಘದ ಮಂಡಳಿಯ ಸದಸ್ಯನ ಹುದ್ದೆ ಸಂಬಂಧಿ ಚುನಾವಣೆಗೆ ಸ್ಪರ್ಧಿಸಲು ಅಪೀಲುದಾರನು ಅನರ್ಹನಾಗಿದ್ದಾನೆಂದು ಆರೋಪಿಸಿದ್ದರೆ, ಅನರ್ಹತೆಯ ವಿಷಯವನ್ನು ಚುನಾವಣಾ ವಿವಾದದಲ್ಲಿ ನಿರ್ಧರಿಸಬೇಕಾಗುತ್ತದೆ.ಮಂಡಳಿಯ ಸದಸ್ಯನನ್ನು ಅನರ್ಹಗೊಳಿಸಿ, 29-ಸಿ ಪ್ರಕರಣದ ( 8) ನೇ ಉಪ-ಪ್ರಕರಣದ ಅಡಿಯಲ್ಲಿ ಕ್ರಮವನ್ನು ತೆಗೆದುಕೊಳ್ಳಬಹುದು; ಪರಂತು, ಆತನು ಮಂಡಳಿಯ ಸದಸ್ಯನಾದ ನಂತರ, 29-ಸಿ ಪ್ರಕರಣದ ( 1) ನೇ ಉಪ-ಪ್ರಕರಣದ (ಹೆಚ್) ಖಂಡದ ಅಡಿಯಲ್ಲಿ ಅನರ್ಹತೆಗೆ ಒಳಪಡಿಸಲಾಗಿದೆ.

16. ಆದುದರಿಂದ, 29-ಸಿ ಪ್ರಕರಣದ (8) ನೇ ಉಪ-ಪ್ರಕರಣದ ಅಡಿಯಲ್ಲಿ ಸಹಾಯಕ ನಿಬಂಧಕರು ಹೊರಡಿಸಿದ ಆದೇಶವನ್ನು, 1959 ರ ಸದರಿ ಅಧಿನಿಯಮದ 29-ಸಿ ಪ್ರಕರಣದ ( 1) ನೇ ಉಪ-ಪ್ರಕರಣದ (ಹೆಚ್) ಖಂಡವನ್ನು ಅವಲಂಬಿಸಿ, ಅಪೀಲಿನಲ್ಲಿ ಸಮರ್ಥಿಸಲಾಗುವುದಿಲ್ಲ.

17. ಈಗ ಪ್ರಶ್ನಿತ ಆದೇಶಕ್ಕೆ ಬಂದಲ್ಲಿ, ಅದರ 4 ನೇ ಕಂಡಿಕೆಯಲ್ಲಿ, 1959 ರ ಸದರಿ ಅಧಿನಿಯಮದ 70 ನೇ ಪ್ರಕರಣದ ಅಡಿಯಲ್ಲಿನ ಚುನಾವಣಾ ವಿವಾದವನ್ನು ಇತ್ಯರ್ಥದಲ್ಲಿರಿಸಲಾಗಿದ್ದು, ಅಪೀಲುದಾರನು ಸದರಿ ವ್ಯವಹರಣೆಗಳನ್ನು ಅನುಸರಿಸಿ, ತನ್ನ ಸದಸ್ಯತ್ವವು ಕಾಲಮಿತಿಯೊಳಗಿತ್ತೆಂದು ಮತ್ತು ಅನರ್ಹತೆಯ ಆದೇಶವು ಆಧಾರರಹಿತವಾಗಿದೆಯೆಂದು ತೋರಿಸಿಕೊಡಬಹುದಾಗಿದೆ ಎಂದು ಮಾನ್ಯ ಏಕಪೀಠ ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ.ಮಾನ್ಯ ಏಕ ಪೀಠ ನ್ಯಾಯಾಧೀಶರನ್ನು ಕುರಿತ ಅಪಾರ ಗೌರವದೊಂದಿಗೆ, ಈ ಅಭಿಪ್ರಾಯವು ಸರಿಯಾಗಿಲ್ಲದಿರಬಹುದು.70 ನೇ ಪ್ರಕರಣದ ಅಡಿಯಲ್ಲಿನ ವಿವಾದದಲ್ಲಿ ಸಹಾಯಕ ನಿಬಂಧಕರು ಹೊರಡಿಸಿದ ಅನರ್ಹತೆಯ ಆದೇಶದ ಕಾನೂನುಬಾಹಿರತೆಯ ವಿಷಯವನ್ನು ಎತ್ತಲು ಅಪೀಲುದಾರನು ಹಕ್ಕುಳ್ಳವನಾಗಿಲ್ಲ, ಅದರಲ್ಲಿ, ಆತನ ಚುನಾವಣೆಯ ಸಿಂಧುತ್ವವನ್ನು ಪ್ರಶ್ನಿಸಲಾಗಿದೆ.ಅಪೀಲುದಾರನು ಸದರಿ ವಿವಾದವನ್ನು ಸಲ್ಲಿಸಿಲ್ಲ ಮತ್ತು ಆತನು ಅದರಲ್ಲಿ ಪ್ರತಿವಾದಿಯಾಗಿದ್ದಾನೆ.

18. ಈ ಸಂದರ್ಭಗಳ ಹಿನ್ನೆಲೆಯಲ್ಲಿ, ಅಪೀಲು ಯಶಸ್ವಿಯಾಗುತ್ತದೆ ಮತ್ತು ಸಹಾಯಕ ನಿಬಂಧಕರು ಹೊರಡಿಸಿದ ಆದೇಶವನ್ನು ತಳ್ಳಿ ಹಾಕಬೇಕಾಗುತ್ತದೆ.

ನಾವು ಹಾಗೆ ಮಾಡುವಾಗ, 1959 ರ ಸದರಿ ಅಧಿನಿಯಮದ 29-ಸಿ ಪ್ರಕರಣದ ( 1) ನೇ ಉಪ-ಪ್ರಕರಣದ (ಹೆಚ್) ಖಂಡದ ಅನ್ವಯತೆಯನ್ನು ಒಳಗೊಂಡಂತೆ, ಅಪೀಲುದಾರನ ಚುನಾವಣೆಯನ್ನು ಪ್ರಶ್ನಿಸಲು ಸಲ್ಲಿಸಿದ ಚುನಾವಣಾ ವಿವಾದದಲ್ಲಿನ ಎಲ್ಲಾ ವಿಷಯಗಳು ಮುಕ್ತವಾಗಿರುತ್ತವೆ ಎಂಬುದನ್ನು ನಾವು ಸ್ಪಷ್ಟಪಡಿಸಬೇಕಾಗುತ್ತದೆ.

19. ಮೇಲೆ ಅಭಿಪ್ರಾಯಪಟ್ಟಿರುವುದಕ್ಕೆ ಒಳಪಟ್ಟು, ನಾವು ಈ ಮುಂದಿನ ಆದೇಶವನ್ನು ಹೊರಡಿಸುತ್ತೇವೆ:

i.ದಿನಾಂಕ: 13 ನೇ ಜೂನ್, 2019 ರ ಪ್ರಶ್ನಿತ ಆದೇಶವನ್ನು ಈ ಮೂಲಕ ತಳ್ಳಿ ಹಾಕಲಾಗಿದೆ ಮತ್ತು ರಿಟ್ ಅರ್ಜಿಸಂಖ್ಯೆ: 54384-385/2017 ನ್ನು ( 1) ನೇ ಮತ್ತು(ii) ನೇ ಖಂಡಗಳ ಮನವಿಯಲ್ಲಿರುವಂತೆ ಪುರಸ್ಕರಿಸಲಾಗಿದ್ದು, ಅವುಗಳನ್ನು ಈ ಕೆಳಗಿನಂತೆ ಓದಲಾಗಿದೆ:

' ' 1) ಅನುಬಂಧ-ಇದರಲ್ಲಿರುವ ಅಪೀಲುಸಂಖ್ಯೆ: ಡಿಆರ್ಎಮ್/ವಿವಾದ/ಸಿ 7/ಅಪೀಲು/19/2017-18ರಲ್ಲಿ 2 ನೇ ಪತಿವಾದಿಯು ಹೊರಡಿಸಿದದಿನಾಂಕ: 27.11.2017 ರ ಪ್ರಶ್ನಿತ ಆದೇಶವನ್ನು ರದ್ದುಗೊಳಿಸಲು, ಸರ್ಷಿಯೋರರಿ ರಿಟ್ಅನ್ನು ಅಥವಾ ಯಾವುದೇ ಇತರ ರಿಟ್ಅನ್ನು ಅಥವಾ ಸಂದರ್ಭಾನುಸಾರ ಆದೇಶವನ್ನು ಹೊರಡಿಸಬಹುದಾಗಿದೆ.

ii) ಅನುಬಂಧ- ಒ ಇದರಲ್ಲಿರುವಸಂಖ್ಯೆ: 29-ಸಿ ಮೊಕದ್ದಮೆ ಸ ಂ ಖ್ಯೆ:ಸನಿ 43/ಡಿಐಎಸ್/ 1/2015-16ರಲ್ಲಿನ 3 ನೇ ಪ್ರತಿವಾದಿಯು ಹೊರಡಿಸಿದದಿನಾಂಕ: 31.07.2017 ರ ಪ್ರಶ್ನಿತ ಆದೇಶವನ್ನು ರದ್ದುಗೊಳಿಸಲು, ಸರ್ಷಿಯೋರರಿ ರಿಟ್ಅನ್ನು ಅಥವಾ ಯಾವುದೇ ಇತರ ರಿಟ್ಅನ್ನು ಅಥವಾ ಸಂದರ್ಭಾನುಸಾರ ಆದೇಶವನ್ನು ಹೊರಡಿಸಬಹುದಾಗಿದೆ ಮತ್ತು ಅನುಬಂಧ-ಕೆಯಲ್ಲಿ 5 ನೇ ಪ್ರತಿವಾದಿಯು ಸಲ್ಲಿಸಿದ ದೂರನ್ನು ವಜಾಗೊಳಿಸಬಹುದಾಗಿದೆ. "

ii.ಅಪೀಲುದಾರನ ಆಯ್ಕೆಯನ್ನು ಪ್ರಶ್ನಿಸಲಾಗಿರುವ 1959 ರ ಸದರಿ ಅಧಿನಿಯಮದ 70 ನೇ ಪ್ರಕರಣದ ಅಡಿಯಲ್ಲಿ ಇತ್ಯರ್ಥದಲ್ಲಿರುವ ವಿವಾದದ ಗುಣಾರ್ಹತೆಗಳ ಕುರಿತಂತೆ ನಾವು ಯಾವುದೇ ನ್ಯಾಯ ನಿರ್ಣಯವನ್ನು ಮಾಡಿಲ್ಲವೆ ಂ ದು ನಾವು ಸ್ಪಷ್ಟಪಡಿಸುತ್ತೇವೆ.

iii.ಯಾವ ಪ್ರಾಧಿಕಾರದ ಮುಂದೆ ವಿವಾದ ಇತ್ಯರ್ಥದಲ್ಲಿರುವುದೋ ಆ ಸಂಬಂಧಪಟ್ಟ ಪ್ರಾಧಿಕಾರವು, ತೀರ್ಪು ಮತ್ತು ಆದೇಶದಲ್ಲಿ ನಿರ್ಣಯಿಸಿರುವುದರಿಂದ ಪ್ರಭಾವಿತವಾಗದೆ, ತನ್ನದೇ ಆದ ಗುಣಾರ್ಹತೆಗಳ ಆಧಾರದ ಮೇಲೆ ಅದನ್ನು ನಿರ್ಧರಿಸಲು ಮುಕ್ತವಾಗಿದೆ.

iv.ಮೇಲಿನ ನಿಬ ಂ ಧನೆಗಳನುಸಾರ ರಿಟ್ ಅಪೀಲನ್ನು ಪುರಸ್ಕರಿಸಲಾಗಿದೆ.

V.ವೆಚ್ಚಕ್ಕೆ ಸ ಂ ಬ ಂ ಧಿಸಿದ ಂ ತೆ ಯಾವುದೇ ಆದೇಶ ಹೊರಡಿಸಿರುವುದಿಲ್ಲ.